ಈ) ೧) ಒಂದು ಪುರುಷ ವೈದ್ಯರ ಹುದ್ದೆ ಏಪ್ರಿಲ್ ೧೯೮೫ರಿಂದ ಖಾಲಿ ಇದೆ.

) ಮಹಿಳಾ ವೈದ್ಯರ ಹುದ್ದೆ ಜುಲೈ ೧೯೮೫ರಿಂದ ಖಾಲಿ ಇದೆ. ವೈದ್ಯರ ಅಭಾವದಿಂದ ಹಾಕಲಾಗಿಲ್ಲ.

ಉ) ಆದಷ್ಟು ಜಾಗ್ರತೆ ಭರ್ತಿ ಮಾಡಲಾಗುತ್ತದೆ.

ಕೂಡ್ಲಿಗಿ ತಾಲ್ಲೂಕಿನಲ್ಲಿ ಹೆಚ್ಚುತ್ತಿರುವ ಬೆಂಕಿ ಅಪಘಾತಗಳು

೧೨೪೮. ಶ್ರೀ ಕೆ. ವಿ. ರವೀಂದ್ರನಾಥ ಬಾಬು (ಕೊಟ್ಟೂರು) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯ ಕೂಡ್ಲಿಗೆ ತಾಲ್ಲೂಕಿನಲ್ಲಿ ಅಗ್ನಿ ಆಕಸ್ಮಿಕಗಳು ಹೆಚ್ಚಿರುವುದು ಗಮನಕ್ಕೆ ಬಂದಿದೆಯೇ?

ಆ) ಕೂಡ್ಲಿಗಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವಂತೆ ಕೋರಿ ಮನವಿ ಬಂದಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಕೂಡ್ಲಿಗಿಯಲ್ಲಿ ತಕ್ಷಣವೇ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಬಿ. ರಾಚಯ್ಯ. (ಗೃಹಮಂತ್ರಿ).—

ಅ) ಕಳೆದ ಮೂರು ವರ್ಷಗಳ ಅಂಕಿಅಂಶಗಳು ಪ್ರಕಾರ ಇಲ್ಲಿನ ಅಗ್ನಿ ಆಕಸ್ಮಿಕಗಳು ಸಾಮಾನ್ಯ ಮಟ್ಟಕಿಂತ ಹೆಚ್ಚಾಗಿಲ್ಲ.

ಆ) ಹೌದು.

ಇ) ಸರ್ಕಾರವು ಮೂರು ಹಂತಗಳಲ್ಲಿ ಅಗ್ನಿ ಶಾಮಕ ಠಾಣೆಗಳನ್ನು ತೆರೆಯಲು ತೀರ್ಮಾನ ಕೈಗೊಂಡಿದೆ. ಅಗ್ನಿಶಾಮಕ ಠಾಣೆಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಮೊದಲು ತೆರೆಯಲಾಗುವುದು. ಎರಡನೇ ಹಂತದಲ್ಲಿ ಉಪ ವಿಭಾಗ ಕೇಂದ್ರ ಮಂಡ್ಯ, ತಾಲ್ಲೂಕು ಕೇಂದ್ರಗಳಲ್ಲಿ ತೆರೆಯಲಾಗುವುದು ಮೂರನೆಯ ಹಂತದಲ್ಲಿ ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವ ಕೆಲವು ಸ್ಥಳಗಳಲ್ಲಿನ ಅಗ್ನಿಶಾಮಕ ಠಾಣೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುವುದು. ಇದು ಸರ್ಕಾರವು ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲು ಅನುಸರಿಸುತ್ತಿರುವ ಸಾಮಾನ್ಯ ನೀತಿಯಾಗಿದೆ.

ಸರ್ಕಾರದ ಈ ಮೇಲಿನ ನೀತಿಯಂತೆ ಕೂಡ್ಲಿಗಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು.

ಅನುಸೂಚಿತ ಜಾತಿಯವರ ಮೇಲೆ ನಡೆದ ದೌರ್ಜನ್ಯದ ಪ್ರಕರಣಗಳು

೧೨೯೭. ಶ್ರೀ ಸಿ. ಕಣ್ಣನ್ (ಶಾಂತಿನಗರ)—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ೧೯೮೫-೮೬ರ ಸಾಲಿನಲ್ಲಿ ಪರಿಶಿಷ್ಟ ಜಾತಿಯವರ ಮೇಲೆ ಆದ ದೌರ್ಜನ್ಯಕ್ಕೆ ಸಂಬಂಧಪಟ್ಟ ಪ್ರಕರಣಗಳೆಷ್ಟು?

ಆ) ಈ ಸಂಬಂಧದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು)—

ಅ) ೧೯೮೫-೮೬

ಆ) ವರದಿಯಾದ ೭೯ ಪ್ರಕರಣಗಳನ್ನು ವಿಚಾರಣೆ ಅಪರಾಧವೆಂದು ತೆಗೆದುಕೊಂಡು ಸಂಬಂಧಪಟ್ಟ ಆರಕ್ಷಕ ಠಾಣೆಗಳಲ್ಲಿ ಅನುಗುಣವಾದ ಪ್ರಕಾರ ಮೊಕದ್ದಮೆಗಳನ್ನು ನೋಂದಾಯಿಸಲಾಗಿದೆ. ೪೪ ಮೊಕದ್ದಮೆಗಳಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರಗಳನ್ನು ಸಲ್ಲಿಸಲಾಗಿದೆ. ೩೦ ಪ್ರಕರಣ